ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು,ನೃಪತುಂಗ ರಸ್ತೆ,ಬೆಂಗಳೂರು**

ಸಂಖ್ಯೆ:ದೈಶಿ/ಟ್ರೋ.ಬ.–01 /2018–19 ದಿನಾಂಕ:31.08.2018.

# ಸುತ್ತೋಲೆ

ವಿಷಯ:2018–19ನೇ ಸಾಲಿನಲ್ಲಿ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಟ್ರೋಫಿ ಮತ್ತು ಪದಕ ಬಹುಮಾನ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ: 27.06.2018ರ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಸಭೆಯ ನಡಾವಳಿ.

* * *

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ 2018–19ನೇ ಸಾಲಿನಲ್ಲಿ ನಡೆಸುವ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಶಾಲಾ ಕ್ರೀಡಾಕೂಟಗಳನ್ನು ನಡೆಸುವಂತೆ ದಿನಾಂಕ: 27.06.2018ರ ರಾಜ್ಯ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಸಭೆಯಲ್ಲಿ ಕ್ರೀಡಾ ಕ್ಯಾಲೆಂಡರ್ ಬಗ್ಗೆ ಚರ್ಚಿಸಿ, ಕ್ರೀಡಾಕೂಟವನ್ನು ನಿಗದಿ ಪಡಿಸಿ ಮಾನ್ಯ ಆಯುಕ್ತರಿಂದ ಅನುಮೋದನೆಗೊಂಡು ಎಲ್ಲಾ ಜಿಲ್ಲೆಗಳಿಗೆ ನಡವಳಿಯ ಪ್ರತಿಯನ್ನು ಈಗಾಗಲೇ ರವಾನಿಸಲಾಗಿದೆ.

2017–18ನೇ ಸಾಲಿನಲ್ಲಿ ಶಾಲಾ ಕ್ರೀಡಾಕೂಟಗಳು ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯುವಾಗ ಕ್ರೀಡೆಯಲ್ಲಿ ವಿಜೇತರಾದ ಕ್ರೀಡಾ ಪಟುಗಳಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕಾರ ಪಡೆದ ಪುಸ್ತಕಗಳನ್ನು ಬಹುಮಾನಗಳನ್ನಾಗಿ ನೀಡಲಾಗುತಿತ್ತು ಅದರಂತೆಯೇ ಪ್ರಸ್ತುತ 2018–19ನೇ ಸಾಲಿನಲ್ಲಿಯೂ ಸಹ ಪುಸ್ತಕ ರೂಪದಲ್ಲಿ ಬಹುಮಾನಗಳನ್ನಾಗಿ ನೀಡುವಂತೆ ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

ಆದರೆ,ದಿನಾಂಕ: 24.08.2018ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಮಾನ್ಯ ಶಿಕ್ಷಣ ಸಚಿವರು ಅದೇಶಿಸಿದಂತೆ, 2018–19ನೇ ಸಾಲಿನಲ್ಲಿ ನಡೆಸುವ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಶಾಲಾ ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾ ಪಟುಗಳಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕಾರ ಪಡೆದ ಪುಸ್ತಕಗಳನ್ನು ನೀಡುವುದರ ಬದಲಿಗೆ ಟ್ರೋಫಿ ಮತ್ತು ಪದಕಗಳನ್ನು ಬಹುಮಾನವನ್ನಾಗಿ ಕ್ರೀಡಾಪಟುಗಳಿಗೆ ನೀಡುವಂತೆ ತಿಳಿಸಿದರು.

ಅದರಂತೆ, ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಯುವ ಎಲ್ಲಾ ಹಂತದ ಕ್ರೀಡಾ ಕೂಟ 2018–19ನೇ ಸಾಲಿನಲ್ಲಿ ಹೋಬಳಿ, ತಾಲ್ಲೂಕು, ಮತ್ತು ಜಿಲ್ಲಾ ಮಟ್ಟದ ಶಾಲಾ ಕ್ರೀಡಾಕೂಟಗಳಲ್ಲಿ ಶಾಲಾ ಮಕ್ಕಳು ಭಾಗವಹಿಸಿ ಕ್ರೀಡೆಯಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಟ್ರೋಫಿ ಮತ್ತು ಪದಕಗಳ ರೂಪದಲ್ಲಿ ಬಹುಮಾನವನ್ನಾಗಿ ನೀಡಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ತಿಳಿಸಿದೆ.

ನಿರ್ದೇಶಕರು

(ಪ್ರೌಢ ಶಿಕ್ಷಣ)

ಪ್ರತಿ

1. ಅಪರ ಆಯುಕ್ತರು,ಸಾ.ಶಿ.ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ
2. ಸಹ ನಿರ್ದೇಶಕರು,ಮೈಸೂರ/ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗ ರವರಿಗೆ ಮಾಹಿತಿಗಾಗಿ
3. ಸಹ ನಿರ್ದೇಶಕರು ಮತ್ತು ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ , ಕೆಂಪೇಗೌಡ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
4. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು[ಆಡಳಿತ]ರವರಿಗೆ ಸೂಕ್ತ ಕ್ರಮಕ್ಕಾಗಿ
5. ವಿಭಾಗೀಯ ಉಪ ನಿರ್ದೇಶಕರು[ದೈಹಿಕ ಶಿಕ್ಷಣ], ಬೆಂಗಳೂರು,ಮೈಸೂರು , ಬೆಳಗಾವಿ ಮತ್ತು ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ
6. ರಾಜ್ಯದ ಎಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಿಗೆ ಕಳುಹಿಸುತ್ತಾ, ಎಲ್ಲಾ ಶಾಲೆಗಳಿಗೆ ಸುತ್ತೋಲೆಯನ್ನು ಕಳುಹಿಸಲು ತಿಳಿಸಿದೆ.